ಕರುದ್ರಂತಪ್ಪ?’ ಎಂದು ಉಲ್ಲಾ ಸವಾಲು ಹಾಕಿದ. ‘ಹೌದಲ್ಲ ಇಲ್ಲಿಗೇ ಬನ್ನಿ’ ಎಂದು ಈ ಹಕ್ಕಿಗಳಿಗೆ ಕರೆಯುವ ಶಕ್ತಿಯ ಮೂಲವಾದರೂ ಯಾವುದು? ಎಂದು ಯೋಚಿಸುತ್ತಾ ನಿಂತೆ. ಇವನ ಮಾತುಗಳು ಇರಿಸುಮುರಿಸು ಎನಿಸಿದರೂ ಕೊನೆಯಲ್ಲಿ ಕೇಳಿದ ಪ್ರಶ್ನೆ ಅರ್ಥಗರ್ಭಿತವಾಗಿತ್ತು.

ಕ್ರಾಕ್ ಚಂದ್ರು ಜೊತೆ ಬಂದಿದ್ದ ಇಬ್ಬರು ನನ್ನನ್ನು ಒಂದು ಗುಮಾನಿಯಲ್ಲೇ ನೋಡುತ್ತಿದ್ದರು. ಪಕ್ಷಿಗಳ ಬಗ್ಗೆ ಎಂತಹ ಬ್ರಿಲಿಯಂಟ್ ಪ್ರಶ್ನೆ ಕೇಳಿದನಲ್ಲ ಎಂದು ಉಲ್ಲಾಸಗೊಂಡು ವಿವರಿಸತೊಡಗಿದೆ. ‘ಲೇ ಪ್ರಕೃತೀನೆ ಅವುಕ್ಕೆ ಕರೆಯುತ್ತೆ ಕಂಡ್ಲ. ಅಲ್ಲಿ ಮಂಜು ಬಿದ್ದು ಐಸ್ ಗೆಡ್ಡೆ ಆಗತ್ಲು ಇವು ಗುಂಪು ಕಟ್ಕೊಂಡು ಹೊಂಟೇ ಬಿಡ್ತಾವೆ. ಸಾವಿರ ಸಾವಿರ ವರ್ಷಗಳಿಂದ ಹುಡುಕಾಡಿ ಅಲೆದಾಡಿ ಬಡಿದಾಡಿ ಅವೇ ಬದುಕೋ ದಾರಿ ನೋಡ್ಕಂಡಿದ್ದಾವೆ. ಯಾವ ಕಾಲದಲ್ಲಿ ಭೂಮಿಯ ಯಾವ ಭಾಗದಲ್ಲಿ ಇದ್ರೆ ಒಳ್ಳೇದು ಅಂತ ಅವುಕ್ಕೆ ಚೆನ್ನಾಗಿ ಗೊತ್ತಿದೆ. ನಮಗೆ ಭಾಳಾ ದೂರ ಅನ್ನಿಸೋದು ಅವುಕ್ಕೆ ಹತ್ರಾನೆ. ಇಂತಲ್ಲಿ ಇಂತಿಂಥ ಕೆರೆ, ಕಟ್ಟೆ, ಬೆಳೆ, ತಮಗೆ ಬೇಕಾದ ಹುಳಹುಪಟೆ ಇರೋದು ತಿಳಕೊಂಡು ಅವೇ ಪ್ರತಿ ವರ್ಷ ಬರ್ತಾವೆ. ಕೆಲವು ಗೂಡು ಕಟ್ಟಿ ಮರಿ ಮಾಡ್ಕೊಂಡು ಹೋಗ್ತಾವೆ. ಇನ್ನೊಂದಿಷ್ಟು ಊಟಗೀಟ ತಿಂದ್ಕೊಂಡು ಪೊಗದಸ್ತಾಗಿ ಮೈ ಬೆಳಸ್ಕೊಂಡು ವಾಪಸ್ಸು ಹಾರ್ತಾವೆ. ಹಿಂಗೇ ನೂರಾರು ಜಾತಿ ಪಕ್ಷಿ ಯಾವು ಯಾವುದೋ ದೇಶದಿಂದ ಬರ್ತಾವೆ. ಸಾವಿರಾರು ವರ್ಷದಿಂದ ಇದೆಲ್ಲಾ ಸದ್ದಿಲ್ಲದಂಗೆ ನಡೀತೈತೆ. ನಾವು ಕಣ್ಣು ಬಿಟ್ಟು ನೋಡೋಕೆ ಶುರು ಮಾಡಿದ ಮೇಲೇ ಈ ರಹಸ್ಯಗಳೆಲ್ಲಾ ಗೊತ್ತಾಗ್ತಿರೋದು ಎಂದೆ. ನನ್ನ ಮಾತು ಅವನು ಒಪ್ಪಲಿಲ್ಲ. ತಲೆ ಕೊಡವಿ, ‘ಇವೆಲ್ಲಾ ನಾವು ನಂಬೋ ಅಂಥದ್ದೇನೋ? ಕೇಳೋರಿದ್ರೆ ಭಲೇ ರೀಲು ಬಿಡ್ತೀರಿ ಕಣ್ಲೆ. ಈ ಭೂಕಾಳಿಕತೆ ಯಾರಾದ್ರು ದಡ್ಡರಿಗೆ ಹೇಳಿ. ಈ ಜುಜುಬಿ ಪಕ್ಷಿಗಳಿಗೆ ಅಷ್ಟೊಂದು ಬುದ್ಧಿ ಐತೆ ಅನ್ನೋದೆ ಸುಳ್ಳು. ಮನುಷ್ಯನ ತಲೆಗಿಂತ ಅವೇ ಚುರುಕು ಅಂತಿಯಾ? ಒಳ್ಳೆ ಆಸಾಮಿ ನೀನು. ಪಕ್ಷಿ ತನ್ನ ಹುಟ್ಟೂರು ಬಿಟ್ಟು ಸಾವಿರಾರು ಮೈಲು ಹಾರಿ ಬರೋದು ಅಂದ್ರೇನು ಹುಡುಗಾಟವೇ? ಹೈಲೀ ಇಂಪಾಸಿಬಲ್’ ಎಂದು ತಲೆ ಕೊಡವಿದ. ಇವನ ಒಪ್ಪಿಸುವುದು ಅಸಾಧ್ಯವೆಂದು ಅರಿವಾಗಿ ‘ಹಕ್ಕಿಗಳಿಗೆ ಜುಜುಬಿ ಅನ್ನಬ್ಯಾಡ್ಲೇ ಬಡ್ಡೀಮಗನೆ. ನಿಂಗೇನು ಗೊತ್ತು ಅವುಗಳ ಬುದ್ಧಿಶಕ್ತಿ’ ಎಂದೆ. ಚಂದ್ರುಗೆ ನಾನು ಹೇಳಿದ ಯಾವ ವಿಷಯಗಳೂ ಆಕರ್ಷಕ ಎನಿಸಲಿಲ್ಲ. ಈ ವಲಸೆ ಹಕ್ಕಿಗಳ ಯಾನ ತಿಳಿಯಲು ಹೊರಟಷ್ಟೂ ನಿಗೂಢತೆ ಸುತ್ತಿಕೊಳ್ಳುತ್ತದೆ. ಮಾತೇ ಬಾರದ ಪಕ್ಷಿಗಳ ಜೀವನದ ವೈವಿಧ್ಯತೆ ಮತ್ತು ವಿಶಿಷ್ಟತೆಗಳನ್ನು ಅವುಗಳ ಸಾಮೀಪ್ಯ ಸಾಧಿಸಿಯೇ ಅರ್ಥ ಮಾಡಿಕೊಳ್ಳಬೇಕು. ಇದಕ್ಕೆಲ್ಲಾ ಹಲವಾರು ವರ್ಷಗಳೇ ಬೇಕು. ಅದರಲ್ಲೂ ನಮ್ಮ ನೆಲದಲ್ಲಿ ಕೆಲವೇ ತಿಂಗಳು ಇದ್ದು ಹೋಗುವ ವಲಸೆ ಪಕ್ಷಿಗಳ ಬಗ್ಗೆ ಸಂಪೂರ್ಣ ತಿಳಿದುಕೊಳ್ಳಲು ಹೊರಡುವುದೂ ದುಸ್ಸಾಹಸದ ಕೆಲಸ. ನಾವೆಷ್ಟೇ ಅವುಗಳ ಬಗ್ಗೆ ಅರಿತರೂ ಅದು ಅಪೂರ್ಣವೇ ಆಗಿರುತ್ತದೆ. ಮೈಗ್ರೇಟ್ ಆಗಿ ಬರುವ ಪಕ್ಷಿಗಳ ಬಗ್ಗೆ ನನಗೂ ಮೊದಲು ಅಷ್ಟೊಂದು ತಿಳಿವಳಿಕೆ ಇರಲಿಲ್ಲ. ಕಾಣುವ ಪಕ್ಷಿಗಳೆಲ್ಲಾ ನಮ್ಮ ನೆಲದಲ್ಲೇ ಹುಟ್ಟಿ ಬೆಳೆಯುತ್ತಿರುವ ಜೀವಗಳೆಂದು ತಪ್ಪಾಗಿ ತಿಳಿದಿದ್ದೆ. ಯಾವಾಗ, ‘ಈ ಹಕ್ಕಿ ಈಗ ಬಿಟ್ಟರೆ ಮತ್ತೆ ಸಿಗುವುದಿಲ್ಲ ನಡೀರಿ ಬೇಗ ಹೋಗೋಣ’ ಎಂದು ಗೆಳೆಯರು ಗಾಬರಿ ಬಿದ್ದು ಹುಡುಕಲು ಹೊರಡಿಸಿದರೋ, ಆಗಲೇ ನನಗೂ ಅರಿವಾಗುತ್ತಾ ಹೋಗಿದ್ದು. ಒಂದೊಂದು ವಲಸೆ ಹಕ್ಕಿಯ ಕಾಣಲು ಒಂದೊಂದು ದಿಕ್ಕಿಗೂ ಓಡಬೇಕೆಂಬ ವಿಷಯ ಮನದಟ್ಟಾಗಿದ್ದು. ಎಲ್ಲಿಗೆ ಯಾವ ಸಮಯದಲ್ಲಿ ಯಾವ ಹಕ್ಕಿ ಬಂದಿಳಿಯುತ್ತದೆ? ಎಷ್ಟು ದಿನ ನೆಲೆಸುತ್ತದೆ? ಏನೇನು ತಿನ್ನುತ್ತದೆ? ಅದರ ಮಕ್ಕಳು ಮರಿ ಮತ್ತು ಸಂಸಾರವನ್ನು ಹೇಗೆ ನಿಭಾಯಿಸುತ್ತದೆ? ಬೇರೆ ನಾಡಿನಿಂದ ಹಾರಿ ಬರುವ ಅವಕ್ಕೆ ದಾರಿ ತೋರಿಸುವವರು ಯಾರು? ಇಂಥಲ್ಲಿಗೇ ಬಂದಿಳಿಯಬೇಕೆಂದು ಅದಕ್ಕೆ ಹೇಳಿ ಕೊಡುವವರು ಯಾರು? ಸ್ಥಳೀಯವಾಗಿ

